CC 18/2024
PW-1

CC 18/2024
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 08.12.2025

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ನನಗೆ ಕಳೆದ 5-6 ವರ್ಷಗಳಿಂದ ಪರಿಚಯ. ನಾನು ಬಸವೇಶ್ವರ ನಗರ, 8ನೇ ಅಡ್ಡರಸ್ತೆ ಚನ್ನಗಿರಿಯಲ್ಲಿ ವಾಸವಿರುತ್ತೇನೆ. ಆರೋಪಿಯು ಕಲ್ಲುಸಾಗರ ರಸ್ತೆ, ಚನ್ನಗಿರಿಯಲ್ಲಿ ವಾಸವಿರುತ್ತಾರೆ. ಆರೋಪಿಯ ಮನೆಯಲ್ಲಿ ಅವರ ಮಗ ಮತ್ತು ಆರೋಪಿ ವಾಸವಿರುತ್ತಾರೆ. ಆರೋಪಿಯು ಗೃಹಕೃತ್ಯದ ಸಲುವಾಗಿ ನನ್ನ ಬಳಿ ಸಾಲ ಪಡೆದಿದ್ದರು. ಆದರೆ ನಿರ್ದಿಷ್ಟವಾಗಿ ಯಾವ ಕೆಲಸಕ್ಕೆಂದು ನನಗೆ ಹೇಳಿರಲಿಲ್ಲ. ಆರೋಪಿಗೆ ಯಾವುದೇ ಜಮೀನು ಇಲ್ಲ ಮತ್ತು ಯಾವುದೇ ವ್ಯಾಪಾರ ಮಾಡುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನಾನು ಅವರಿಗೆ ಕೇಳಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದಾದರೂ ವ್ಯಕ್ತಿಗೆ ಸಾಲ ಕೊಡುವಾಗ ಅವರು ಯಾವ ಕಾರಣಕ್ಕೆ ಸಾಲ ಕೇಳುತ್ತಿದ್ದಾರೆ ಎಂದು ವಿಚಾರಿಸಿ ಕೊಡುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ತನ್ನ ಮಗ ವ್ಯಾಪಾರ ಮಾಡುತ್ತಿದ್ದಾರೆ ಎಂದು ಹೇಳಿದ್ದರಿಂದ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆರೋಪಿಯ ಮಗ ಏನು ವ್ಯಾಪಾರ ಮಾಡುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ನನಗೆ ಗೊತ್ತಿಲ್ಲ. ಆರೋಪಿಯ ಮಗ ಮತ್ತು ನನ್ನ ಮಗ ಸ್ನೇಹಿತರು ಇರುವ ಕಾರಣ ನನಗೆ ಆರೋಪಿಯ ಪರಿಚಯ ಆಗಿರುತ್ತದೆ. ಆರೋಪಿಗೆ ಈ ಪ್ರಕರಣದಲ್ಲಿ ಹೇಳಿರುವಂತೆ ಹಣ ಕೊಟ್ಟಿರುತ್ತೇನೆ ಎಂದು ಹೇಳುವ ಪೂರ್ವದಲ್ಲಿ ಆರೋಪಿಗೆ ಮತ್ತು ಅವರ ಮಗನಿಗೆ ಸಣ್ಣ ಮೊತ್ತದ ಹಣವನ್ನು ಕೊಟ್ಟು ತೆಗೆದುಕೊಂಡು ಮಾಡುತ್ತಿದ್ದೆ. ಮಲ್ಲಿಕಾರ್ಜುನ ತಂದೆ ಲೇಟ್ ಬಸಪ್ಪ ನನಗೆ ಸಂಬಂಧದಲ್ಲಿ ದೊಡ್ಡಮ್ಮನ ಮಗ ಇರುತ್ತಾರೆ. ನನ್ನ ಮತ್ತು ಮಲ್ಲಿಕಾರ್ಜುನರವರ ನಡುವೆ ಒಳ್ಳೆಯ ಸಂಬಂಧ ಇರುತ್ತದೆ ಎಂದರೆ ಸರಿ. ಆರೋಪಿಯು ಮಲ್ಲಿಕಾರ್ಜುನರವರ ಜೊತೆ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆ ವ್ಯವಹಾರದ ಸಂಬಂಧ ನನ್ನ ಮಗ ನನ್ನ ಜೊತೆ ಮಾತನಾಡಿಲ್ಲ. ನನ್ನ ಮಗನ ಹೆಸರು ರಕ್ಷಿತ್ ಜಿ ಎಂ. ಮಲ್ಲಿಕಾರ್ಜುನ್ ಮತ್ತು ಆರೋಪಿಯ ನಡುವೆ ಒಂದು ಜಾಗದ ಸಂಬಂಧ ವ್ಯವಹಾರ ಆಗಿದ್ದು ಅದಕ್ಕೆ ನನ್ನ ಮಗ 1 ನೇ ಸಾಕ್ಷಿದಾರ ಎಂದು ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ದಿನಾಂಕ 01.06.2023 ರಂದು ಆರೋಪಿಯು ನನ್ನ ಬಳಿ ಸಾಲ ಪಡೆದಿದ್ದರು. ನಮ್ಮ ಮನೆಯಲ್ಲಿ ನಾನು ಆರೋಪಿಗೆ ಹಣ ಕೊಟ್ಟಿದ್ದೆ. ಆ ದಿನ ಆರೋಪಿ ಮತ್ತು ಅವರ ಮಗ ನಮ್ಮ ಮನೆಗೆ ಬಂದಿದ್ದರು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಮಗ ಇದ್ದೆವು. ಮಧ್ಯಾಹ್ನದ ಸಮಯದಲ್ಲಿ ನಮ್ಮ ಮನೆಗೆ ಬಂದಿರಬಹುದು ನಿರ್ದಿಷ್ಟವಾಗಿ ಸಮಯ ಗೊತ್ತಿಲ್ಲ. ನಾನು ಆರೋಪಿಗೆ 500 ಮುಖಬೆಲೆಯಲ್ಲಿ ಸಾಲವನ್ನು ಕೊಟ್ಟಿದ್ದೆ. ನನಗೆ ಅಡಿಕೆ ತೋಟ ಇದ್ದು ಕೈ ವ್ಯಾಪಾರದ ಮೂಲಕ ಅಡಿಕೆಯನ್ನು ಮಾರಿದ ಹಣವನ್ನು ಇಟ್ಟುಕೊಂಡಿದ್ದು ಅದನ್ನೇ ನಾನು ಆರೋಪಿಗೆ ಕೊಟ್ಟಿದ್ದೆ. ಅಡಿಕೆಯನ್ನು ನಾನು ಚೇಣಿಗೆಂದು ಕೊಡುತ್ತೇನೆ. ತುಮಕೋಸ್ ನಲ್ಲಿ ನಾನು ಸದಸ್ಯೆ ಇರುತ್ತೇನೆ. ತುಮಕೋಸಿನಲ್ಲಿ ಸಹ ಅಡಿಕೆಯನ್ನು ಮಾರುತ್ತೇನೆ. ಪ್ರಶ್ನಿತ ಚೆಕ್ಕಿನಲ್ಲಿ ಆರೋಪಿಯು ಕನ್ನಡದಲ್ಲಿ ಸಹಿ ಮಾಡಿದ್ದು ಉಳಿದ ಬರವಣಿಗೆ ಇಂಗ್ಲೀಷನಲ್ಲಿ ಇರುತ್ತದೆ ಎಂದರೆ ಸರಿ. ಪ್ರಶ್ನಿತ ಚೆಕ್ಕನ್ನು ಯಾರು ಭರ್ತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ

ನನಗೆ ಕೊಟ್ಟಿರುತ್ತಾರೆ ಅದನ್ನು ನಾನು ತೆಗೆದುಕೊಂಡು ಬಂದಿದ್ದೆ. ಆರೋಪಿಯು ನನ್ನ ಬಳಿ ಹಣ ಪಡೆಯುವ ಸಮಯದಲ್ಲಿಯೇ ಚೆಕ್ಕನ್ನು ಕೊಟ್ಟಿದ್ದರು. ಆರೋಪಿಯು ನನ್ನ ಬಳಿ ಹಣವನ್ನು ಬಡ್ಡಿಯ ಆಧಾರದ ಮೇರೆಗೆ ಪಡೆದಿದ್ದು ಅದನ್ನು 6 ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಹೇಳಿದ್ದರು. ಆರೋಪಿಯು ಚೆಕ್ಕನ್ನು ಕೊಡುವ ದಿನದಂದೇ ಚೆಕ್ಕಿನಲ್ಲಿ ದಿನಾಂಕ ಬರೆದುಕೊಟ್ಟಿರಲಿಲ್ಲ, 6 ತಿಂಗಳು ಬಿಟ್ಟು ನಾನು ಹಣವನ್ನು ಕೇಳಲು ಹೋದಾಗ ಚೆಕ್ ನಲ್ಲಿ ದಿನಾಂಕ ಬರೆದುಕೊಟ್ಟಿರುತ್ತಾರೆ. 6 ತಿಂಗಳು ಬಿಟ್ಟು ಹಣ ಕೇಳಲು ಹೋದಾಗ ಆರೋಪಿಯು ನನ್ನ ಖಾತೆಯಲ್ಲಿ ಹಣ ಇರುತ್ತದೆ ಚೆಕ್ಕನ್ನು ಬ್ಯಾಂಕಿಗೆ ಹಾಜರಿಸಿ ಎಂದು ಹೇಳಿದ್ದರು ಆ ಪ್ರಕಾರ ನಾನು ಚೆಕ್ಕನ್ನು ಬ್ಯಾಂಕಿಗೆ ಹಾಜರಿಸಿದಾಗ ಹಣ ಇಲ್ಲ ಎಂದು ವಾಪಸ್ಸು ಬಂದಿರುತ್ತದೆ. ಆರೋಪಿ ಮತ್ತು ಮಲ್ಲಿಕಾರ್ಜುನ್ ರವರ ನಡುವೆ ದಿನಾಂಕ 17.11.2022 ರಂದು ಸ್ವಾಧೀನರಹಿತ ನೋಂದಣಿ ಕರಾರು ಪತ್ರ ಆಗುವ ಸಮಯದಲ್ಲಿ ಆರೋಪಿಯು ಪ್ರಶ್ನಿತ ಚೆಕ್ಕನ್ನು ಮಲ್ಲಿಕಾರ್ಜುನ್ ರವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನನಗೂ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು 2-3 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸಾಕ್ಷಿಯು ಒಂದು ವರ್ಷದಿಂದ ಬೆಂಗಳೂರಿನಲ್ಲಿ ವಾಸವಿದ್ದು, ಚನ್ನಗಿರಿಯಲ್ಲಿ ಒಂದು ತಿಂಗಳು ಬೆಂಗಳೂರಿನಲ್ಲಿ ಒಂದು ತಿಂಗಳು ಇರುತ್ತೇವೆ ಎಂದು ನುಡಿಯುತ್ತಾರೆ. ಮಲ್ಲಿಕಾರ್ಜುನ್ ರವರು ತಮಗೆ ಬರಬೇಕಾದ ಹಣಕ್ಕೆ ಸಂಬಂಧಿಸಿದಂತೆ ನನ್ನ ಕಡೆಯಿಂದ ಈ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮತ್ತು ಮಲ್ಲಿಕಾರ್ಜುನ್ ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮಗನನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷಿ ಮಾಡಿಸಿಕೊಳ್ಳಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಮಲ್ಲಿಕಾರ್ಜುನ್ ರವರ ಪ್ರಕರಣಕ್ಕೆ ಕರೆಸಿದರೆ ತೊಂದರೆ ಇಲ್ಲ ಈ ಪ್ರಕರಣಕ್ಕೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನನ್ನ ಮಗ ಸಾಕ್ಷಿ ನುಡಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಈ ಪ್ರಕರಣದಲ್ಲಿ ನನ್ನ ಮಗನ ಸಾಕ್ಷಿಯ ಅವಶ್ಯಕತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಗ ಮತ್ತು ನನ್ನ ಮಗ ಬಹಳ ವರ್ಷಗಳಿಂದ ಪರಿಚಯ. ಆರೋಪಿಯು ನನ್ನ ಕಡೆಯಿಂದ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮಲ್ಲಿಕಾರ್ಜುನ್ ರವರ ಕಡೆಯಿಂದ ಪಡೆದ ಹಣಕ್ಕೆ ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ನಾನು ದುರುಪಯೋಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಜಮೀನು ಮತ್ತು ವ್ಯಾಪಾರ ಇಲ್ಲದೇ ಇದ್ದರು ಸಹ 8 ಲಕ್ಷ ಸಾಲವನ್ನು ನಾನು ಕೊಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಮನೆ ಇರುತ್ತದೆ ಮತ್ತು ಅವರ ಮಗ ವ್ಯಾಪಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಕೊಟ್ಟ ಚೆಕ್ ನಂ. 348630 ಇರಬಹುದು. ನಮ್ಮ ಕುಟುಂಬದಲ್ಲಿ ಒಬ್ಬರು ವಕೀಲರು ಇರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೂ ಮತ್ತು ನನಗೂ ಯಾವುದೇ ಹಣಕಾಸಿನ ವ್ಯವಹಾರ ಆಗದೇ ಇದ್ದರೂ ಸಹ ನಾನು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ನನಗೆ, ನನ್ನ ಮಗನಿಗೆ ಮತ್ತು ಆರೋಪಿ ಹಾಗೂ ಅವರ ಮಗನಿಗೆ ಬಿಟ್ಟರೆ ಯಾರಿಗೂ ಸಹ ಗೊತ್ತಿಲ್ಲ. ನಾನು ಬೇರೆ ಯಾರ ಸಮಕ್ಷಮವು ಹಣವನ್ನು ಕೊಟ್ಟಿಲ್ಲ.

**ಮರು ವಿಚಾರಣೆಃ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

CC 18/2024
PW-1

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**